ಧರ್ಮ ಎಂಬ ಹೆಸರಿನ ಮೂರನೇ ತರಗತಿಯ ಹುಡುಗನೊಬ್ಬ ಪಟ್ಟಣದಲ್ಲಿ ತನ್ನ ತಂದೆ-ತಾಯಿಯೊಂದಿಗೆ ವಾಸಿಸುತ್ತಿದ್ದ. ಬೇಸಿಗೆ ರಜೆ ಬಂತು ಅಂದರೆ ಹಳ್ಳಿಯಲ್ಲಿರುವ ಅಜ್ಜಿಮನೆ ಅವನನ್ನು ಕೈಬೀಸಿ ಕರೆಯುತ್ತಿತ್ತು. ಅಲ್ಲಿ ಅಜ್ಜಿ ತಾನೇ ಕೈಯಾರೆ ಬೆಳೆಸಿದ ಮಾವು, ಗೇರು, ಹಲಸು, ಅನಾನಸ್, ಗಿಡಗಳಿಗೆಲ್ಲ ಹಣ್ಣು ಬಿಡುವ ಸಮಯ.

ಅಜ್ಜಿ ಬಗೆಬಗೆಯ ತರಕಾರಿ ಗಿಡಗಳನ್ನೂ ಬೆಳೆಸಿದ್ದಳು. ವಯಸ್ಸಾಗಿದ್ದರೂ ಅಜ್ಜಿ ಅವುಗಳಿಗೆ ಬಾವಿಯಿಂದ ಬಿಂದಿಗೆಯಲ್ಲಿ ನೀರು ಜಗ್ಗಿ ತಂದು ಹನಿಸುತ್ತಿದ್ದುದನ್ನು ಕಂಡು ಧರ್ಮನಿಗೆ ಪಾಪ ಅನ್ನಿಸುವುದು. ಅವಳು ತುಂಬಿಸಿಟ್ಟ ಬಕೆಟ್ಟಿನ ನೀರನ್ನು ತಂಬಿಗೆಯಲ್ಲಿ ಒಯ್ದು ತಾನೂ ಗಿಡಗಳಿಗೆ ಹನಿಸುತ್ತಾ ಅವಳಿಗೆ ತನ್ನ ಕೈಲಾದ ಸಹಾಯ ಮಾಡುತ್ತಿದ್ದ. ತೋಟದ ಕಸ ಗುಡಿಸುವುದು, ಅಜ್ಜಿ ಒಗೆದುಕೊಟ್ಟ ಬಟ್ಟೆಯನ್ನು ಒಣಹಾಕುವುದು, ತಿಂದ ತಟ್ಟೆಯನ್ನು ತಾನೇ ತೊಳೆಯುವುದು ಮಾಡುತ್ತಾ ಸದಾ ಅಜ್ಜಿಯ ಹಿಂದೆಯೇ ಓಡಾಡಿಕೊಂಡಿರುತ್ತಿದ್ದ. ಹಾಗಾಗಿ ಬೇಸಿಗೆ ಬಂತೆಂದರೆ ಅಜ್ಜಿ ಧರ್ಮ ಬರುವುದನ್ನೇ ಕಾಯುತ್ತಿದ್ದಳು. ಪುಟ್ಟ ಧರ್ಮ ಬ್ಯಾಟನ್ನು ಹಿಡಿದು ಮೆಲ್ಲಗೆ ತಮ್ಮ ಕಾಲುಗಳಿಗೆ ಹೊಡೆಯುತ್ತಾ ಸುತ್ತಮುತ್ತ ಓಡಾಡಿಕೊಂಡಿರುವುದನ್ನು ನೋಡುವುದೇ ಆ ಗಿಡಮರಗಳಿಗೆಲ್ಲ ಒಂದು ಹಿತವಾದ ಅನುಭವ.

ಆಗಲೇ ಧರ್ಮನಿಗೆ ಯಾರೋ ಸಣ್ಣಗೆ ನರಳಿದಂತೆ ಕೇಳಿಸಿದ್ದು. ಅಚ್ಚರಿಯಿಂದ ಕಿವಿಗೊಟ್ಟು ಆಲಿಸಿದ. ಅಲ್ಲೇ ಇರುವ ಪುಟ್ಟ ಅನಾನಸ್ ಸಸಿಯೊಂದು ಸಣ್ಣಗೆ ಕಂಪಿಸಿತು. ಅನಾನಸ್ ಗಿಡದ ಬಳಿ ಕುಳಿತ ಧರ್ಮ 'ಯಾಕೆ ಹುಷಾರಿಲ್ಲವೆ?' ಎಂದು ಕೇಳಿದ.

'ಹೌದು ಧರ್ಮ, ಈಗ ಹುಟ್ಟಿದ ಆ ತರಕಾರಿಗಳಿಗೆ ನೀರು ಹಾಕಲು ಹೋಗಿ ಅಜ್ಜಿ ನನ್ನನ್ನು ಮರೆತೇ ಬಿಟ್ಟಿದ್ದಾಳೆ. ನನಗೆ ವಿಪರೀತ ಬಾಯಾರಿಕೆ' ಎಂದಿತು. ಧರ್ಮ ಇದೆಲ್ಲ ಚಿಕ್ಕ ವಿಷಯ ಅಜ್ಜಿಗೆ ಹೇಳಿ ದೊಡ್ಡ ಮಾಡಲು ಹೋಗಲಿಲ್ಲ. ಓಡಿ ಹೋಗಿ ಬಕೆಟ್ಟಿನಲ್ಲಿರುವ ನೀರನ್ನು ತಂಬಿಗೆಯಲ್ಲಿ ತಂದು ಅದರ ಮೇಲೆ ಸುರಿದ. ಅದನ್ನು ಕಂಡ ಅಜ್ಜಿ 'ಏ ಧರ್ಮ, ಬಕೆಟ್ಟಿನ ನೀರು ಪೂರ್ತಿ ಖಾಲಿ ಮಾಡಬೇಡ, ನಮಗೆ ಕೈಕಾಲು ತೊಳೆಯಲು ಬೇಕಾಗ್ತದೆ. ನನ್ನ ಬಳಿ ಮತ್ತೆ ನೀರು ಜಗ್ಗಲು ಸಾಧ್ಯವಿಲ್ಲ, ಕೈಕಾಲು ನೋಯುತ್ತಿದೆ, ಹುಶ್ಶಪ್ಪಾ' ಅನ್ನುತ್ತಾ ಮನೆ ಎದುರಿನ ಕಟ್ಟೆಯಲ್ಲಿ ಕೂತೇ ಬಿಟ್ಟಳು. 'ಬಾವಿಯ ಹಗ್ಗ ಎಳೆಯಲು ನಾನು ಸಹಾಯ ಮಾಡಲೇ ಅಜ್ಜಿ?' ಕೇಳಿದ ಧರ್ಮ.

'ಬೇಡ ಕಂದಾ, ಬಾವಿಯ ಹತ್ತಿರ ಮಕ್ಕಳು ಹೋಗಬಾರದು, ಮುಂದಿನ ತಿಂಗಳು ನಿನ್ನ ವರುಣ ಮಾಮ ಬಂದು ನೀರು ಹಾಕ್ತಾನೆ ಬಿಡು ಅವಕ್ಕೆಲ್ಲ' ಅಂತ ಅಲ್ಲೇ ಬಾಯಿ ಮುಚ್ಚಿಸಿದಳು. ಉಪಾಯವಿಲ್ಲದೇ ಧರ್ಮ ಆ ಅನಾನಸ್ ಗಿಡವನ್ನು ಕರುಣೆಯಿಂದ ನೋಡುತ್ತಾ ಅದರ ಬಳಿಯೇ ಓಡಾಡಿಕೊಂಡಿದ್ದ, ಅದು ಮತ್ತೂ ನರಳುತ್ತಿದ್ದಂತೆ ಕೇಳಿತು. ಅಲ್ಲೇ ಕುಳಿತು ಅದರ ಎಲೆಗಳನ್ನು ನೇವರಿಸಿದ, 'ಏ ಧರ್ಮಾ ಮುಟ್ಟಬೇಡ ಅದನ್ನು, ಅದರ ಎಲೆಗಳು ಬ್ಲೇಡಿನ ಥರಾ ಹರಿತ ಇರ್ತವೆ, ಇತ್ತ ಬಾ' ಅಂತ ಅಜ್ಜಿ ಗದರಿದಳು.

ಆಗಲೇ ಅನಾನಸ್ ಗಿಡ 'ಧರ್ಮಾ, ಸ್ವಲ್ಪ ನಿಲ್ಲು, ನನಗೇನೋ ಸಂಕಟವಾಗ್ತಿದೆ, ನಿನ್ನ ಸೂರ್ಯ ಮಾಮ ಯಾಕೋ ಇತ್ತೀಚೆಗೆ ತುಂಬಾ ಕೋಪದಿಂದ ಉರಿದುರಿದು ಬೀಳ್ತಾ ಇದ್ದಾನೆ ನೋಡೋ' ಅಂದಿತು.

'ಹೌದು, ಸೂರಿಮಾಮ ಬಹಳ ಕೋಪಿಷ್ಟ, ನಾನೂ ಮೊದಲು ಅವನನ್ನು ಕಂಡರೆ ಬಹಳ ಹೆದರುತ್ತಿದ್ದೆ, ಆದರೆ ಈ ವರ್ಷ ನೋಡು, ನಾನು ಬಂದ ಕೂಡಲೇ ನನಗೆ ಈ ಬ್ಯಾಟ್ ಮಾಡಿಕೊಟ್ಟಿದ್ದಾನೆ ಆಡಲು' ಅಂತ ಕೈಯಲ್ಲಿರುವ ತೆಂಗಿನ ಗರಿ ಹೆಡೆಯ ಪುಟ್ಟ ಬ್ಯಾಟನ್ನು ಅದಕ್ಕೆ ತೋರಿಸಿದ. ಆಗಲೇ ಅದು 'ನಿನ್ನ ವರುಣಮಾಮ ಅಂದರೆ ನನಗೆ ಬಹು ಇಷ್ಟ. ಸ್ವಲ್ಪ ಕರೀತೀಯಾ ಅವನನ್ನು?' ಅಂತ ಬೆಣ್ಣೆ ಮಾತನಾಡಿತು.

ಧರ್ಮನಿಗೆ ಅದರ ಸಂಕಟ ಕಂಡು ತಡೆಯಲಾಗಲಿಲ್ಲ. 'ಅಜ್ಜೀ ಅಜ್ಜೀ ವರುಣಮಾಮನಿಗೆ ಒಂದು ಫೋನ್ ಮಾಡಲೇ? ವರುಣಮಾಮ ಬಂದರೆ ಎಲ್ಲ ಗಿಡಗಳಿಗೂ ಅವನೇ ನೀರು ಹಾಕಿ ಹೋಗಿಬಿಡ್ತಾನೆ, ಪ್ಲೀಸ್' ಅಂತ ಅಲ್ಲಿಂದಲೇ ಗೋಗರೆದ. ಅದಕ್ಕೆ ಅಜ್ಜಿ 'ಅಯ್ಯೋ ಬೇಡಪ್ಪ, ನಿನ್ನ ಸೂರಿಮಾಮನಿಗೆ ಸಿಟ್ಟು ಬರ್ತದೆ. ಇಬ್ಬರೂ ಅಣ್ಣತಮ್ಮರು ಯಾವಾಗ್ಲೂ ಜೊತೆಗಿರುವುದಿಲ್ಲ, ಒಬ್ಬರು ಬಂದರೆ ಇನ್ನೊಬ್ಬರು ಓಡಿಹೋಗ್ತಾರೆ, ಇವನ ಡ್ಯೂಟಿ ಮುಗಿದಿಲ್ಲ ಇನ್ನೂ, ಸ್ವಲ್ಪ ಇರು ಕಂದಾ'

